# ನಿದ್ರೆಯಿಂ ಸುಖವಿಲ್ಲ

■ ರೇಖಾ ಹೆಗಡೆ ಬಾಳೇಸರ
ಕಲೆ: ರಾಮಕೃಷ್ಣ ಸಿದ್ರಪಾಲ

ಮನುಷ್ಯರನ್ನು ಗಂಡು–ಹೆಣ್ಣು, ಅಕ್ಷರಸ್ಥರು–ಅನಕ್ಷರಸ್ಥರು, ಮಾಂಸ ತಿನ್ನುವವರು–ತಿನ್ನದವರು... ಹೀಗೆ ಸ್ಥೂಲವಾಗಿ ವರ್ಗೀಕರಿಸಬಹುದು. ಇದೇ ಸಾಲಿನಲ್ಲಿ ಬರುವ ಇನ್ನೊಂದು ಪ್ರಕಾರ, ಆರಾಮವಾಗಿ ನಿದ್ದೆ ಬರುವವರು/ಬಾರದವರು ಎಂಬುವವರದ್ದು. ಪ್ರತಿ ಮನೆಯಲ್ಲಿ, ಊರಿನಲ್ಲಿ ನಿದ್ರಾವರ್ಗದ ಎರಡೂ ಕಡೆಯ ಜನ ಇದ್ದೇ ಇರ್ತಾರೆ.

‘ಎಲ್ಲರೂ ನಿದ್ದೆ ಮಾಡ್ತಾರೆ, ಅದೇನು ದೊಡ್ಡ ಸಂಗತಿ’ ಎನ್ನುತ್ತೀರಾ? ಹಾಗಾದರೆ ನೀವು ಪಕ್ಕಾ ಮೇಲೆ ಹೇಳಿದ ಸುರಳೀತ ನಿದ್ರೆ ಮಾಡುವವರಲ್ಲಿ ಒಬ್ಬರಿರಬೇಕು. ಇದೇ ಮಾತನ್ನು ನಿದ್ರೆ ಬಾರದೇ ಒದ್ದಾಡುವವರ ಬಳಿ ಹೇಳಿ ನೋಡಿ... ನಿಮ್ಮ ತಲೆ ತುಂಬಿ, ತೂತಾಗುವಷ್ಟು ನಿದ್ದೆಗೇಡಿತನದ ಕತೆಗಳನ್ನು ಹೇಳುತ್ತಾರೆ. ಎಲ್ಲರೂ ಬಯಸುವ, ಕೆಲವರಿಗಷ್ಟೇ ಸುಲಭಕ್ಕೆ ಒಲಿಯುವ, ಉಳಿದವರನ್ನು ಸತಾಯಿಸಿ... ಹಂಬಲಿಸಿ ಹೈರಾಣಾದ ಮೇಲಷ್ಟೇ ಬರುವ ‘ಡ್ರಾಮಾಕ್ವೀನ್’ ಅದು.

‘ನಿದ್ರೆಯಿಂ ಸುಖವಿಲ್ಲ’ ಎನ್ನುತ್ತಾನೆ ಕವಿ ಸರ್ವಜ್ಞ. ನಿಜಕ್ಕೂ ಮಲಗಿದ ತಕ್ಷಣ ನಿದ್ರೆ ಆವರಿಸುವವರಂಥ ಧನ್ಯ, ಸುಖೀಜನ ಇನ್ನಿಲ್ಲ. ‘ಚಿಂತೆ ಇಲ್ಲದವ ಸಂತೆಯಲ್ಲೂ ಮಲಗುತ್ತಾನೆ’ ಎನ್ನುವ ಮಾತಿದೆ. ಸಂತೆ ಬಯಲಲ್ಲಿ, ಬಸ್ ನಿಲ್ದಾಣದಲ್ಲಿ, ಮದುವೆ ಮನೆಯಲ್ಲಿ, ಸಭೆ ಸಭಾಂಗಣದಲ್ಲಿ ಕುಂತಂತೆಯೇ ನಿದ್ದೆಗೆ ಜಾರುವ ಜನ ಕಮ್ಮಿಯಿಲ್ಲ. ಕೆಲ ರಾಜಕಾರಣಿಗಳಂತೂ ವೇದಿಕೆಯ ಮೇಲೆ ತೂಕ(ಡಿಕೆ) ಹಾಕಲು ಫೇಮಸ್ಸು. ಕೆಲವರಿಗೆ ಬಸ್ ಏರುತ್ತಲೇ ಮಂಪರು ಆವರಿಸಿ, ಅಂಡು ಸೀಟಿಗೆ ತಾಗುತ್ತಿದ್ದಂತೆಯೇ ನಿದ್ರಾಲೋಕಕ್ಕೆ ಪಯಣ ಶುರು. ಬಸ್ ಹೊಂಡ ಗುಂಡಿ ಹಾರುತ್ತ, ರಸ್ತೆಯುಬ್ಬು ಏರುತ್ತ ಇಳಿಯುತ್ತ ಕುಲುಕುತ್ತಿದ್ದರೆ ನಿದಿರಮ್ಮ ತೊಟ್ಟಿಲು ತೂಗಿದಂತೆ, ಎಂಜಿನ್ನಿನ ಕರ್ಕಶ ಶಬ್ದ ಜೋಗುಳದಂತೆ ಇವರ ಪಾಲಿಗೆ. ತರಗತಿಯ ಪಾಠಗಳ ಮೊರೆತ, ಮೀಟಿಂಗ್ ಕಾನ್ಫರೆನ್ಸ್‌ಗಳ ಕೊರೆತ, ಸಂಗೀತ, ಗಣಿತ ಎಲ್ಲವೂ ಅವರವರ ಅಭಿರುಚಿಗೆ ತಕ್ಕಂತೆ ‘ಒಳ್ಳೊಳ್ಳಾಯಿ’ ಹಾಡುವ ವಿಷಯಗಳೇ.



ದಣಿದ ದೇಹದ ಗೆಳೆಯ ನಿದ್ದೆ. ಗದ್ದೆ ಬದುವಿರಲಿ, ಮರದ ನೆರಳಿರಲಿ, ತೋಟದ ತಂಪಲಿರಲಿ... ದುಡಿದುಡಿದು ದಣಿದ ಜೀವವನ್ನು ಹುಡುಕಿಕೊಂಡು ಬಂದು ಮೈದಡವುವ ಅಮ್ಮ–ಅಜ್ಜಿಯಂತೆ ಅದು. ತರಚಿದ, ಗಾಯಗೊಂಡ, ನೋವುಂಡ ಶರೀರಕ್ಕೆ ತಂಪೆರೆವ ಮುಲಾಮು ಅದು. ಮೈಕೈ ನೋವು, ಮೈಗ್ರೇನ್‌ಗೆ ರಾಮಬಾಣ ಗಾಢ ನಿದ್ರೆ. ರಟ್ಟೆ ಮುರಿದು ರೊಟ್ಟಿ ತಿನ್ನುವ ದುಡಿವಾನಿಯಿರಲಿ, ಆ ರೊಟ್ಟಿ ಬಡಿದು ಸುಸ್ತಾದ ಮನೆಯಾಕೆಯಿರಲಿ, ಊರೆಲ್ಲ ಕುಣಿದು ಆಡಿಕೊಂಡು ಬರುವ ಮಗುವಿರಲಿ, ವಯಸ್ಸಿನ ಭಾರಕ್ಕೆ ನಲುಗಿದ ಹಿರಿ ಜೀವವಿರಲಿ...

ಪ್ರತಿಯೊಬ್ಬರಿಗೂ ದಿನದ ಆಯಾಸಕ್ಕೆ ಪೂರ್ಣವಿರಾಮ ಹಾಕಿ ಮತ್ತೆ ಮರುದಿನ ಶುರುವಾಗುವ ಹೊಸದಿನದ ಓಟಕ್ಕೆ ಚೈತನ್ಯದಿಂದ ಅಣಿಮಾಡಿಕೊಡುವ ರೀಸೆಟ್ ಬಟನ್ ನಿದ್ದೆ. ‘ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ? ಎಳ್ಳು ಜೀರಿಗೆ ಬೆಳೆಯೋಳ ಭೂಮ್ತಾಯಿ... ಎದ್ದೊಂದು ಗಳಿಗೆ ನೆನೆದೇನ...’ ಎಂದು ಹಾಡಿದವರು ಇಂಥ ಸುಖ(ನಿದ್ದೆ)ಜೀವಿಗಳೇ ಇರಬೇಕು.

ಇವರೆಲ್ಲ ಸುಲಭಕ್ಕೆ ನಿದ್ದೆ ಬರುವ ಪುಣ್ಯಾತ್ಮರು, ಬ್ರಹ್ಮ ಒಂದೊಳ್ಳೆ ನಿದ್ದೆ ಮುಗಿಸಿ ಫ್ರೆಶ್ ಆದ ನಂತರ ಸೃಷ್ಟಿ ಮಾಡಿ ಕಳಿಸಿದ ಜನ. ಈ ಪರಿಯ ಭಾಗ್ಯ ಎಲ್ಲರಿಗೂ ಎಲ್ಲುಂಟು? ಪಾಪ, ನಿದ್ದೆ ಬರದವರ ಅವಸ್ಥೆ ಅಂತಿಂಥದ್ದಲ್ಲ. ಕಣ್ಣು ಮುಚ್ಚಿ ಒರಗಿ ನಾಲ್ಕು ಸಲ ಆಕಳಿಕೆ ಹೊಡೆದು ಮಲಗಿದ ಮೇಲೂ ನಿದ್ರೆರಾಯ ಬರಲೊಲ್ಲ. ಒಂದೆಂಟು ಸಲ ಲೊಚಗುಟ್ಟಿ, ಎದ್ದು ಲೈಟ್ ಹಾಕಿ, ಸಮಯ ನೋಡಿ... ಮೂತ್ರಯಾತ್ರೆ ಮಾಡಿ... ಒಂದು ಕುಡ್ತೆ ನೀರು ಕುಡಿದು... ಹೊಚ್ಚಿ ಮಲಗಿ ಸರಿಹೊತ್ತು ದಾಟಿದ ಮೇಲೆಯೇ ಆವರಿಸುವ ಮಾಯೆ ಅದು.

ಅಂತೂ ನಿದ್ದೆ ಬಂದೀತು. ಆದರೆ ಅಲ್ಲಿಯವರೆಗಿನ ಕ್ಷಣಕ್ಷಣವೂ ಇವರ ಪಾಲಿಗೆ ಯುಗವಿದ್ದಂತೆ. ಕೆಲವರಿಗೆ ಭಾರೀ ಸೂಕ್ಷ್ಮ ಕಿವಿ. ರಸ್ತೆಯಲ್ಲೆಲ್ಲೋ ಸಾಗಿದ ಕಾರು, ಮೂರು ಬೀದಿಯಾಚೆ ಬೊಗಳಿದ ನಾಯಿಗಳ ದನಿ, ಯಾರದೋ ಮನೆಯಲ್ಲಿ ಫ್ಲಶ್ ಮಾಡಿದ ಸದ್ದು, ಹಳ್ಳಿಯಲ್ಲಿದ್ದವರಾದರೆ ಹಿತ್ತಿಲ ಮರದಲ್ಲಿ ಗೂಬೆ ಕೂಗಿದ್ದು, ಆಚೆಮನೆಯ ದನ ಅಂಬಾ ಎಂದಿದ್ದು, ತೆಂಗಿನ ಗರಿ ಬಿದ್ದಿದ್ದು... ಎಲ್ಲವೂ ಗಮನಕ್ಕೆ ಬರುತ್ತದೆ. ಜೋರಾಗಿ ಬೀಸುವ ಗಾಳಿ, ಮಿಂಚು–ಗುಡುಗು, ಮಳೆ ಎಲ್ಲವೂ ಬಡಿದೆಬ್ಬಿಸುವ ಅಂಶಗಳೇ.

ಈಗ ಇಂಥವರ ಪಕ್ಕ ಒಬ್ಬ ಜೋರಾಗಿ ಗೊರಕೆ ಹೊಡೆಯುವ ವ್ಯಕ್ತಿ ಮಲಗಿದ್ದರೆ ‘ನಿದ್ರೆಗೆ ಕಿಚ್ಚು ಹಚ್ಚೆಂದ’! ಆ ಗೊರಕೆಯ ಒಂದೊಂದು ಸದ್ದೂ ಬರ್ತಾ ಬರ್ತಾ ತಾರಕಕ್ಕೇರಿದಂತೆ ಭಾಸವಾಗಿ, ಕಿವಿಗೊತ್ತಿಕೊಂಡ ಚಾದರ, ಕಂಬಳಿಗಳ ಕೋಟೆಗೆ ಕನ್ನ ಕೊರೆದು ಒಳನುಸುಳಿ, ಕರ್ಣಪಟಲಗಳನ್ನು ಹರಿದು ಒಳಗಿವಿಯ ಸುರಂಗದೊಳು ದಂಡಯಾತ್ರೆ ಸಾಗಿ... ಸೀದಾ ಮೆದುಳಿಗೇ ಭೈರಿಗೆ ಇಟ್ಟಂತಾಗದಿದ್ದರೆ ಕೇಳಿ. ಅನ್ಯರ ಗೊರಕೆ ಸದ್ದು ಹಾಗೂ ಇವರ ಅನಿದ್ರಾಸಂಕಟ ನೇರ ಅನುಪಾತದಲ್ಲಿ ಸಾಗುತ್ತವೆ. ಗರಗಸದಿಂದ ನಾಟಾ ಕೊಯ್ದಂತೆ ಕೇಳುವ ‘ಗೊರ್ ಗೊರ್’ ಎಂಬ ಸದ್ದು ಏರಿದಂತೆ ನಿದ್ದೆ ಬಾರದವರ ಒದ್ದಾಟವೂ ಮೇರೆ ಮೀರುತ್ತದೆ. ನಿಜದಲ್ಲಿ ಗೊರಕೆಯ ಸದ್ದಿಗಿಂತ ‘ಇದು ನಿದ್ದೆ ಮಾಡೋಕೆ ಬಿಡ್ತಾ ಇಲ್ಲ’ ಎಂಬ ಅಸಹನೆಯೇ ಜನರನ್ನು ಹೆಚ್ಚು ಎಚ್ಚರವಿಡೋದು.

ನಮ್ಮೂರ ಕಡೆ ಮದುವೆ, ಮುಂಜಿ, ವರ್ಷಾಂತಿಕ, ಕಾರ್ತೀಕದಂಥ ವಿಶೇಷ ಸಮಾರಂಭಗಳಾದಾಗ ಅತಿಥಿಗಳಿಗೆ ರಾತ್ರಿ ಹಾಸಿಗೆ ಹಾಸೋದು ಭಾರೀ ತಲೆಬಿಸಿ ಕೆಲಸ. ಬರೀ ಹಾಸಿಗೆ ಹಾಸಿ ದಿಂಬು, ಚಾದರದ ವ್ಯವಸ್ಥೆ ಮಾಡಿದರೆ ಆಗಲಿಲ್ಲ. ಗೊರಕೆ ಹೊಡೆಯುವವರಿಗೆ, ಅದರ ಹೆಸರು ಕೇಳಿದರೂ ನಿದ್ದೆ ಮಾಡಲಾಗದವರಿಗೆ, ಹೆಂಗಸರಿಗೆ, ಗಂಡಸರಿಗೆ, ಬೇಗ ಏಳಬೇಕಾದರಿಗೆ, ತಡವಾಗಿ ಮಲಗುವವರಿಗೆ... ಬೇರೆಯೇ ಹಾಸಬೇಕು. ಈ ಎಲ್ಲಾ ಲೆಕ್ಕಾಚಾರ, ಪರ್ಮುಟೇಶನ್ ಕಾಂಬಿನೇಷನ್ ಮಾಡಿ ಹಾಸಿಗೆ ಹಾಸುವ ಹೊತ್ತಿಗೆ ಮನೆಜನ ಹೈರಾಣು. ಇಷ್ಟಾಗಿಯೂ ಬೆಳಿಗ್ಗೆ ಅಲ್ಲೊಬ್ಬರು, ಇಲ್ಲೊಬ್ಬರು ಅಂಗಳದ ಕಟ್ಟೆ ಮೇಲೆ, ಹೆಬ್ಬಾಗಿಲ ಕಾಲುಮಣೆ ಮೇಲೆ, ಹಿತ್ತಲಕಡೆ ಕಟ್ಟೆ ಮೇಲೆ ಘೋರ ಚಳಿಯಲ್ಲೂ ಮುಚ್ಚಿಹಾಕಿಕೊಂಡು ಮಲಗಿದ್ದಾರೆಂದರೆ ಅವರು ಮಧ್ಯರಾತ್ರಿ ಎಲ್ಲೋ ಗೊರಕಾಸುರನ ಹಾವಳಿ ತಡೆಯಲಾರದೇ ಗುಳೆ ಎದ್ದು ಬಂದ ನಿರಾಶ್ರಿತರೆಂದೇ ಲೆಕ್ಕ.

ನನ್ನ ಪ್ರವರ ಹೇಳಿಕೊಳ್ಳಬೇಕೆಂದರೆ ನಾನೂ ಸೇರಿದಂತೆ ಅಪ್ಪನ ಮನೆಯವರೆಲ್ಲ ಸೂಕ್ಷ್ಮ ನಿದ್ದೆಯವರು. ಗಡಿಯಾರ ‘ಢಣ್’ ಎಂದಿದ್ದರಿಂದ ಹಿಡಿದು ರಾತ್ರಿ ದನ ಕೂಗಿತು, ಎಮ್ಮೆ ‘ಅಂಯಿಕ್’ ಅಂತು, ಸೋಗೆ ಬಿದ್ದ ಸದ್ದಾಯ್ತು... ಎಂದೆಲ್ಲಾ ಬೆಳಿಗ್ಗೆ ಲೆಕ್ಕ ಕೊಡುವ ಮಂದಿ. ಹಳ್ಳಿ ಮನೆಯ ‘ಕಿರ್’ ಎನ್ನುವ ದಪ್ಪದ ಬಾಗಿಲುಗಳನ್ನು ರಾತ್ರಿ ಯಾರು ತೆಗೆದರೂ ಒಂದಿಬ್ಬರು ಎಚ್ಚರಾಗುವುದು ಖಂಡಿತ. ಮದುವೆಯಾದ ಶುರುವಿನಲ್ಲಿ ಗಂಡ ಗದ್ದಲದ ನಡುವೆಯೂ ಆರಾಮ ಮಲಗುವುದನ್ನು ನೋಡಿ ಅಚ್ಚರಿಯಾಗುತ್ತಿತ್ತು ನನಗೆ. ಮದುವೆಯಾದ ಒಂದು ತಿಂಗಳಿಗೆ, ಏಪ್ರಿಲ್‌ನಲ್ಲಿ ಬೆಂಗಳೂರಿನ ನಮ್ಮ ಮನೆಗೆ ಊರಿಂದ ಅತ್ತೆ ಬಂದರು. ಅವರೂ ಗದ್ದಲದ ಮಧ್ಯೆಯೇ ಶುದ್ಧ ನಿದ್ದೆ ತೆಗೆಯುವ ಪೈಕಿ. ಅದೂ ಅಂಥಾ ಬಿರುಬೇಸಿಗೆಯಲ್ಲಿ ಮೂರು ಕಂಬಳಿ